# ನಾಗತಿಹಳ್ಳಿ ಚಂದ್ರಶೇಖರ



ಕಥೆಗಾರ, ಕಾದಂಬರಿಕಾರ, ಸಿನಿಮಾ ನಿರ್ದೇಶಕ, ಗೀರತಚನೆಕಾರ ನಾಗತಿಹಳ್ಳಿ ಚಂದ್ರಶೇಖರ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿಯವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಓದುಗರನ್ನು ಒಲಿಸಿಕೊಳ್ಳುವಂತೆ ಬರೆದ, ಜನರು ಮುದಗೊಳ್ಳುವಂತೆ ಸಿನಿಮಾಗಳನ್ನು ಮಾಡಿದವರು ನಾಗತಿಹಳ್ಳಿ. ಕೆಲದಶಕಗಳ ಹಿಂದೆ ಕನ್ನಡದ ಈಗಿನ ಮುಂಚೂಣಿಯ ಕಥೆಗಾರರ ಕಥೆಗಳ ಜೊತೆಗೆ ನಾಗತಿಹಳ್ಳಿ ಅವರ ಕಥೆಗಳೂ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವು.

1985ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಎಂಟು ಚಿನ್ನದ ಪದಕಗಳೊಂದಿಗೆ ಕನ್ನಡ ಎಂ.ಎ. ಪದವಿಯನ್ನು ನಾಗತಿಹಳ್ಳಿ ಪಡೆದರು. ಕಥೆ, ಕಾದಂಬರಿಗಳ ಬರವಣಿಗೆ, ಅಧ್ಯಾಪನಗಳ ಜೊತೆಗೇ ಅವರು ಸಿನಿಮಾಗಳಿಗೂ ಕೆಲಸ ಮಾಡಲು ಶುರುಮಾಡಿದರು. ಅವರು ಮೊದಲ ಸಿನಿಮಾಕ್ಕೆ ಕೆಲಸ ಮಾಡಿದ್ದು 'ಕಾಡಿನ ಬೆಂಕಿ'ಗೆ ಸಂಭಾಷಣೆ ಬರೆಯುವುದರ ಮೂಲಕ. 'ಕೊಟ್ರೇಶಿ ಕನಸು', 'ಅಮೆರಿಕ ಅಮೆರಿಕ', 'ಹೂಮಳೆ', 'ಅಮೃತಧಾರೆ', 'ಮಾತಾಡ್ ಮಾತಾಡು ಮಲ್ಲಿಗೆ' ಅವರ ನಿರ್ದೇಶನದ, ಜನಮಾನಸವನ್ನು ಮುಟ್ಟಿದ ಕೆಲವು ಸಿನಿಮಾಗಳಾಗಿವೆ. ಅವರು ಈತನಕ 13 ಸಿನಿಮಾ, ಕಿರುತೆರೆಯ 10 ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರೆ. 'ಇಷ್ಟಕಾಮ್ಯ' ಅವರ ಇತ್ತೀಚಿನ ಸಿನಿಮಾ.

ಒಂಬತ್ತು ಕಥಾಸಂಗ್ರಹಗಳು, ಮೂರು ಕಾದಂಬರಿಗಳು, ಆರು ಪ್ರವಾಸ ಕಥನಗಳು, 11 ಅಂಕಣಬರಹಗಳ ಪುಸ್ತಕಗಳನ್ನು ಪ್ರಕಟಿಸಿರುವ ಅವರು, ಮೂರು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಇವೂ ಸೇರಿದಂತೆ ಅವರ 33 ಪುಸ್ತಕಗಳು ಪ್ರಕಟವಾಗಿವೆ.

**ಕಿಟಕಿ ಬದಿ ಕುಳಿತಿದ್ದ. ಅಕ್ಕ ಭಾವ ಮುಂದುಗಡೆ ಕುಳಿತಿದ್ದರು. ಭದ್ರಾವತಿಯವರೆಗೂ ಬಯಲಿತ್ತು. ಅನಂತರ ಮರ ಗಿಡಗಳ ಗುಂಪು ಕ್ರಮೇಣ ದಟ್ಟವಾಗುತ್ತಾ ಹೋಯಿತು. ಸಂಜೆಯೂ ಆಯಿತು. ಶಿವಮೊಗ್ಗ ದಾಟಿದ ಮೇಲೆ ಕಾಡೂ ಕತ್ತಲೂ ಒಟ್ಟಿಗೆ ಆವರಿಸತೊಡಗಿತ್ತು. ನಸುಕು ಹರಿಯುವ ವೇಳೆಗೆ ದೇವರಾಜ ಅಕ್ಕ ಭಾವನೊಟ್ಟಿಗೆ ಕಾರವಾರಕ್ಕೆ ಬಂದುಬಿಟ್ಟಿದ್ದ...**

★★★

**ನೋಡುತ್ತಾನೆ! ಸೂರ್ಯ ಪಶ್ಚಿಮದಲ್ಲಿ ಹುಟ್ಟುತ್ತಿದ್ದಾನೆ!... ಭೂಗೋಳದ ಮಾಸ್ತರು**